ॐ

# Kutumba Prabodhan

No. 75-76, "Jnanagiri", 4th Cross, 2nd main, Soudamini Layout, Konanakunte Main Road, Bangalore - 560 062

Ph. 099001 57714

ಆತ್ಮೀಯ ಬಂಧು ಶ್ರೀ ...............................................

ಸಸ್ನೇಹ ನಮಸ್ಕಾರಗಳು.

ನಾವೆಲ್ಲರೂ ದಾಂಪತ್ಯ ಜೀವನಕ್ಕೆ ಇತ್ತೀಚೆಗಷ್ಟೇ ಕಾಲಿರಿಸಿ ಕೌಟುಂಬಿಕ ಜೀವನವನ್ನು ಪ್ರಾರಂಭಿಸಿರುವವರು. ನಮ್ಮೆಲ್ಲರ ಜೀವನ ಸುಂದರವಾಗಿ, ಅರ್ಥಪೂರ್ಣವಾಗಬೇಕು, ನಮ್ಮಿಬ್ಬರ ಮನೆಗಳಿಗೂ ಹೆಮ್ಮೆ, ಗೌರವ ತರುವಂತೆ ಬೆಳೆಯಬೇಕೆಂಬ ಆಸೆ ನಮ್ಮೆಲ್ಲರಿಗೂ ಇದೆ. ಅದರಂತೆ ನಮ್ಮ ನಮ್ಮ ಪರಂಪರೆಗಳ ವಾರಸುದಾರರಾಗಿ ಅದರ ಸೌಗಂಧವನ್ನು ಮುಂದಿನ ಪೀಳಿಗೆಗೆ ಪಸರಿಸುವ ಜವಾಬ್ದಾರಿಯೂ ನಮ್ಮ ಮೇಲಿದೆ. ಆದರೆ ಇಂದಿನ ವೇಗದ ಯುಗದಲ್ಲಿ ಸುಖವನ್ನರಸಿ ಹೊರಟ ಮಾನವನಿಗೆ ಸುಖ ಸಾಧನಗಳು ಹೆಚ್ಚುತ್ತಿವೆ. ಹೊಸ ಸಾಧನಗಳೂ ಸಿಗುತ್ತಿವೆ ಆದರೆ ಸುಖವು ಸಿಕ್ಕಿಲ್ಲ. ತೊಳಲಾಟ ನಿಂತಿಲ್ಲ ಎಲ್ಲರೂ ಕ್ರಮೇಣ ಒಂಟಿ ಆಗಿ ಹತಾಶರಾಗುತ್ತಿದ್ದಾರೆ. ಮಾನವ ಸ್ವಭಾವತಃ ಸಮಾಜ ಜೀವಿಯಾದ್ದರಿಂದ ಅವನು ಒಂಟಿಯಾಗಿ ಬದುಕಲಾರ. ಸಮಾಜದಲ್ಲಿನ ನಾನಾರೀತಿಯ ಗುಣ ಸ್ವಭಾವದ ಜನರೊಂದಿಗೆ ಹೊಂದಿಕೊಂಡು ಬದುಕಬೇಕಾದುದು ಅವನಿಗೆ ಅನಿವಾರ್ಯ. ಅದಕ್ಕೆ ಅಗತ್ಯವಿರುವ ಶಿಕ್ಷಣ ಮತ್ತು ಸಂಸ್ಕಾರದ ಪ್ರಕ್ರಿಯೆ ಶೈಶವದಿಂದಲೇ ಆರಂಭವಾಗುವುದು ಕುಟುಂಬದಲ್ಲಿ. ಎಂದರೆ ಕುಟುಂಬದಲ್ಲಿ ಲಭಿಸುವ ಅನೌಪಚಾರಿಕ ಶಿಕ್ಷಣದಿಂದ ಮಾತ್ರ ಸಾಧ್ಯ. ಆದರೆ ಬೇಗ ಸುಖ ಪಡಬೇಕು ಎಂಬ ಧಾವಂತದಲ್ಲಿ ವಸ್ತುಗಳನ್ನರಸಿ ಹೊರಟವರಿಗೆ ಮೌಲ್ಯಗಳು ಮರೆಯಾಗುತ್ತಿವೆ ಸಂಬಂಧಗಳೂ ದೂರ ಆಗುತ್ತಿವೆ. ಸರಿ, ತಪ್ಪುಗಳ ವಿವೇಚನೆಯನ್ನೂ ಕಳೆದುಕೊಳ್ಳುತ್ತಿದ್ದಾರೆ. ಅದರ ಫಲವಾಗಿ ಇಂದು ಏನು ಮಾಡುವುದು ಎಂದು ತಿಳಿಯದೆ ಹತಾಶರಾಗಿ ಕೈ ಚೆಲ್ಲಿ ಕೂರುವ ಸ್ಥಿತಿಯಲ್ಲಿದ್ದೇವೆ. ಇವೆಲ್ಲದರ ಪರಿಣಾಮವಾಗಿ ಸಾವಿರಾರು ವರ್ಷಗಳಿಂದ ನಿರಂತರವಾಗಿ ಸಮಾಜಕ್ಕೆ ಶಕ್ತಿ ನೀಡುತ್ತಾ ಬಂದಿದ್ದ ಕುಟುಂಬ ವ್ಯವಸ್ಥೆ ಇಂದು ದುರ್ಬಲಗೊಳ್ಳುತ್ತಿದೆ. ಪರಸ್ಪರರಲ್ಲಿ ವಿಶ್ವಾಸ, ನಂಬಿಕೆಗಳು ದೂರವಾಗುತ್ತಿವೆ. ಸಣ್ಣ ಸಣ್ಣ ಸಮಸ್ಯೆಯನ್ನೇ ಬೆಟ್ಟದಷ್ಟು ಮಾಡಿಕೊಂಡು ವಿಚ್ಛೇದನಕ್ಕೆ ಮುಂದಾಗುತ್ತಿರುವ ದಂಪತಿಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ವಿವಾಹ ಅಥವಾ ಮದುವೆ ಎನ್ನುವುದು ತನ್ನ ಮೂಲ ಅರ್ಥವನ್ನು ಕಳೆದುಕೊಂಡು ಕೇವಲ ಶಾರೀರಿಕ ಸುಖವೇ ಮೂಲ ಉದ್ದೇಶ ಎನ್ನುವಂತಾಗಿದೆ. ಒಟ್ಟಿನಲ್ಲಿ ನಮ್ಮ ಮನದಾಸೆಗೂ ವಾಸ್ತವಿಕತೆಗೂ ಅಂತರ ಹೆಚ್ಚುತ್ತಾ ಮನಸ್ಸು ದ್ವಂದ್ವಕ್ಕೆ ಸಿಲುಕಿ ಒತ್ತಡವೂ ಹೆಚ್ಚುತ್ತದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿ ನಮ್ಮಂತಹ ಸಮಾನಮನಸ್ಕರೆಲ್ಲ ಒಟ್ಟಿಗೆ ಸೇರಿ ಮುಕ್ತ ವಾತಾವರಣದಲ್ಲಿ ಪರಸ್ಪರ ಸಂವಾದ ಚರ್ಚೆಯ ಮೂಲಕ ನಮ್ಮ ಅನುಭವಗಳನ್ನು ಹಂಚಿಕೊಂಡು ಒಟ್ಟಾಗಿ ಚಿಂತಿಸಿ ಸೂಕ್ತ ಪರಿಹಾರಗಳನ್ನು ಗುರುತಿಸಿದರೆ ಕ್ರಮೇಣ ನಮ್ಮ ಮನೆಗಳಲ್ಲಿ ಅವನ್ನು ಅಳವಡಿಸಿಕೊಳ್ಳಬಹುದು. ಹಾಗೆ ಚಿಂತಿಸಲು ಉತ್ತಮ ಮನೆಯೊಂದರ ಹಿತಕರ ವಾತಾವರಣದ ಹಿನ್ನೆಲೆ ಇದ್ದರೆ ನಮ್ಮ ಚಿಂತನೆಗೂ ಬಲ ಬರುತ್ತದೆ. ಈ ಅಂಶಗಳನ್ನು ಗಮನದಲ್ಲಿ ಇಟ್ಟು ರೂಪಿತವಾದ ಕಾರ್ಯಕ್ರಮವೇ "ಕುಟುಂಬ ಚಿಂತನ ಯಾತ್ರೆ".

ಇದರ ಸ್ವರೂಪ ಹೀಗಿದೆ.

- ಆಯ್ದ ನವ ದಂಪತಿಗಳು ಈ ಕಾರ್ಯಕ್ರಮಕ್ಕೆ ಅಪೇಕ್ಷಿತರು.
- ಈ ಕಾರ್ಯಕ್ರಮದ ಪ್ರಧಾನ ವಿಷಯ "ನಮ್ಮ ಕುಟುಂಬ"ವೇ. ಆದರೆ ಇಲ್ಲಿ ಕುಟುಂಬದ ಕುರಿತಾಗಿ ಬೋಧನೆಗಳಿಲ್ಲ. ಚಿಂತನೆ, ಚರ್ಚೆ ಚಟುವಟಿಕೆಗಳ ಮೂಲಕ ನಡೆಯುವ ಕಾರ್ಯಕ್ರಮ. ವೈಯಕ್ತಿಕ ಮಾತುಕತೆಗೂ ಅವಕಾಶವಿರುತ್ತದೆ.
- ಭಾಗವಹಿಸುವ ದಂಪತಿಗಳೆಲ್ಲರೂ ಮಾರ್ಚ್ 31, 2013ರ ಭಾನುವಾರದಂದು ಬೆಳಗ್ಗೆ 8.00 ರಿಂದ ಸಂಜೆ 6.00 ಗಂಟೆಯವರಗೆ ನಡೆಯುವ ಈ ಕಾರ್ಯಕ್ರಮದಲ್ಲಿ ಪೂರ್ಣವಾಗಿ, ಮುಕ್ತ ಮನಸ್ಸಿನಿಂದ ಭಾಗವಹಿಸಬೇಕು. ಕಾರ್ಯಕ್ರಮದ ಸ್ಥಳದಲ್ಲಿಯೇ ಉಪಾಹಾರ ಹಾಗೂ ಭೋಜನದ ವ್ಯವಸ್ಥೆಯಿರುತ್ತದೆ.
- ಈ ಕಾರ್ಯಕ್ರಮದಲ್ಲಿ ಭಾಗವಹಿಸಲು 20 ನವ ದಂಪತಿಗಳಿಗೆ ಮಾತ್ರ ಅವಕಾಶವಿರುವುದರಿಂದ ಭಾಗವಹಿಸಲು ಇಚ್ಛಿಸುವ ದಂಪತಿಗಳು ಮುಂಚಿತವಾಗಿ ತಿಳಿಸುವುದು ಉತ್ತಮ.

ಮಿಕ್ಕೆಲ್ಲವೂ ಕುಶಲ

ತಮ್ಮವ

**ಸತೀಶ**

ಪ್ರಾಂತ ಸಂಯೋಜಕ

**ಕಾರ್ಯಕ್ರಮದ ದಿನ : 31.03.2013, ಭಾನುವಾರ**

**ಕಾರ್ಯಕ್ರಮ ನಡೆಯುವ ಸ್ಥಳ :**

**ಶ್ರೀ ಅಮರನಾಥ್‌ರವರ ಮನೆ**

ಮಂತ್ರಿ ಲೇಕ್‌ವ್ಯೂ, ಕನಕಪುರ ರಸ್ತೆ

ತಲಘಟ್ಟಪುರ, ಬೆಂಗಳೂರು - 560 062.

ದೂರವಾಣಿ : 9880058473

**ಹೆಚ್ಚಿನ ಮಾಹಿತಿಗಾಗಿ :**

**ರಾಘವೇಂದ್ರ ಹೆಬ್ಬಾರ್ – 93437 84855** hebbarrk@hotmail.com